# LESSON BASED ASSESSMENT ( LBA) ಆಧಾರಿತ ಮಾದರಿ ಪ್ರಶ್ನೆಪತ್ರಿಕೆ ( SA - 1) : 01

**ವಿಷಯ : ಗಣಿತ  ತರಗತಿ : 10  ಅಂಕಗಳು : 80  ಸಮಯ : 03 : 15 ಗಂಟೆ**

**ಪ್ರಶ್ನೆ - I) ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರಗಳನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ.** $8 \times 1 = 8$

1) 1 ಮತ್ತು 10 ರ ನಡುವಿನ ಅವಿಭಾಜ್ಯ ಸಂಖ್ಯೆಯು ( ಸುಲಭ )

A) 2  B) 3  C) 4  D) 12

2) ರೇಖಾತ್ಮಕ ಬಹುಪದೋಕ್ತಿಯ ಡಿಗ್ರಿ ( ಮಹತ್ತಮ ಘಾತ) ( ಸುಲಭ ) .

A) 0  B) 1  C) 2  D) 3

3) $x + 2y = 3$ ಮತ್ತು $2x + 4y = k$ ಈ ರೇಖಾತ್ಮಕ ಸಮೀಕರಣಗಳ ಜೋಡಿಯನ್ನು ಪ್ರತಿನಿಧಿಸುವ ರೇಖೆಗಳು ಐಕ್ಯಗೊಳ್ಳುವ ರೇಖೆಗಳಾದರೆ, 'k' ಯ ಬೆಲೆಯು ( ಕಠಿಣ )

A) 3  B) 6  C) - 3  D) - 6

4) $x ( x + 2 ) = 6$ ಇದು ಒಂದು ( ಸಾಧಾರಣ )

A) ರೇಖಾತ್ಮಕ ಸಮೀಕರಣ  B) ವರ್ಗ ಸಮೀಕರಣ  C) ಘನ ಬಹುಪದೋಕ್ತಿ  D) ವರ್ಗ ಬಹುಪದೋಕ್ತಿ

5) ಒಂದು ಸಮಾಂತರ ಶ್ರೇಢಿಯ 'n' ನೇ ಪದ $a_n = 3n - 2$ ಆದರೆ, 9ನೇ ಪದವು ( ಸುಲಭ )

A) - 25  B) 5  C) - 5  D) 25

6) 2 AB = DE ಮತ್ತು BC = 8cm ಇರುವಂತೆ Δ ABC ಯು Δ DEF ಗೆ ಸಮರೂಪಿಯಾಗಿದೆ. EF ನ ಅಳತೆಯು ( ಸಾಧಾರಣ )

A) 12 cm  B) 4 cm  C) 16 cm  D) 8cm

7) ಮೂಲ ಬಿಂದುವಿನಿಂದ ( - 3, 4 ) ಬಿಂದುವಿಗೆ ಇರುವ ದೂರವು ( ಸುಲಭ )

A) 7 ಮಾನಗಳು  B) 1 ಮಾನ  C) 5 ಮಾನಗಳು  D) - 5 ಮಾನಗಳು

8) 5m ಎತ್ತರದ ಒಂದು ಧ್ವಜ ಸ್ತಂಭವು 4m ಉದ್ದದ ನೆರಳನ್ನು ಉಂಟು ಮಾಡುತ್ತದೆ. ಅದೇ ಸಮಯದಲ್ಲಿ 20m ಉದ್ದದ ನೆರಳನ್ನು ಉಂಟು ಮಾಡುವ ಮರದ ಎತ್ತರವು ( ಸಾಧಾರಣ )

A) 25 m  B) 30 m  C) 60 m  D) 20 m

**ಪ್ರಶ್ನೆ - II) ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.** $8 \times 1 = 8$

9) 96 ನ್ನು ಅದರ ಅವಿಭಾಜ್ಯ ಅಪವರ್ತನಗಳ ಗುಣಲಬ್ಧವಾಗಿ ವ್ಯಕ್ತಪಡಿಸಿ. ( ಸುಲಭ)

10) $p(x) = x^2 + 7x + 10$ ಈ ಬಹುಪದೋಕ್ತಿಯ ಶೂನ್ಯತೆಗಳ ಮೊತ್ತವನ್ನು ಕಂಡುಹಿಡಿಯಿರಿ. ( ಸುಲಭ )

11) ಎರಡು ಚರಾಕ್ಷರವುಳ್ಳ ರೇಖಾತ್ಮಕ ಸಮೀಕರಣಗಳ ಜೋಡಿಗಳು ಅಸ್ಥಿರ ಜೋಡಿಯಾಗಿದ್ದರೆ, ಅವು ಎಷ್ಟು ಪರಿಹಾರವನ್ನು ಹೊಂದಿರುತ್ತವೆ? ( ಸಾಧಾರಣ )

12) ವರ್ಗ ಸಮೀಕರಣದ ಆದರ್ಶ ರೂಪ ಬರೆಯಿರಿ. ( ಸುಲಭ )

13) ಒಂದು ಸಮಾಂತರ ಶ್ರೇಢಿಯ 4ನೇ ಪದ 11 ಮತ್ತು 3ನೇ ಪದ 7 ಆದರೆ, ಶ್ರೇಢಿಯ ಸಾಮಾನ್ಯ ವ್ಯತ್ಯಾಸ ಎಷ್ಟು? ( ಸಾಧಾರಣ )

14) ತ್ರಿಭುಜದ ಕೋನ - ಕೋನ - ಕೋನ ಸಮರೂಪತೆಯ ನಿರ್ಧಾರಕ ಗುಣವನ್ನು ನಿರೂಪಿಸಿ. ( ಸುಲಭ )

15) A( 5, 4 ) ಮತ್ತು B( 1, 4 ) ಈ ಬಿಂದುಗಳನ್ನು ಸೇರಿಸುವ ರೇಖಾಖಂಡದ ಮಧ್ಯಬಿಂದುವಿನ ನಿರ್ದೇಶಾಂಕಗಳನ್ನು ಬರೆಯಿರಿ. ( ಸಾಧಾರಣ )

16) ಮೂಲ ಬಿಂದುವಿನಿಂದ P ( x, y ) ಬಿಂದುವಿಗಿರುವ ದೂರವನ್ನು ಕಂಡುಹಿಡಿಯುವ ಸೂತ್ರ ಬರೆಯಿರಿ. ( ಸುಲಭ)

**ಪ್ರಶ್ನೆ - III) ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.** $8 \times 2 = 16$

17) $\sqrt{5} - 7$ ಒಂದು ಅಭಾಗಲಬ್ಧ ಸಂಖ್ಯೆ ಎಂದು ಸಾಧಿಸಿ. ( ಸಾಧಾರಣ )

18) $p (x) = 6x^2 - 3 - 7x$ ಬಹುಪದೋಕ್ತಿಯ ಶೂನ್ಯತೆಗಳನ್ನು ಕಂಡುಹಿಡಿಯಿರಿ. ( ಸಾಧಾರಣ )

19) ಕೊಟ್ಟಿರುವ ರೇಖಾತ್ಮಕ ಸಮೀಕರಣಗಳ ಜೋಡಿಯನ್ನು ಆದೇಶ ವಿಧಾನದಿಂದ ಬಿಡಿಸಿ. $x + y = 14$ ಮತ್ತು $x - y = 4$ ( ಸಾಧಾರಣ )

20) $2x^2 - 5x + 3 = 0$ ಈ ವರ್ಗ ಸಮೀಕರಣದ ಶೋಧಕವನ್ನು ಕಂಡುಹಿಡಿದು, ಮೂಲಗಳ ಸ್ವಭಾವವನ್ನು ಬರೆಯಿರಿ. ( ಸಾಧಾರಣ)

21) ಒಂದು ಸಮಾಂತರ ಶ್ರೇಢಿಯಲ್ಲಿ 10 ಪದಗಳಿವೆ. ಕೊನೆಯ ಪದ 34 ಮತ್ತು ಸಾಮಾನ್ಯ ವ್ಯತ್ಯಾಸ 3 ಆದರೆ, ಮೊದಲನೇ ಪದ ಕಂಡುಹಿಡಿಯಿರಿ ( ಸಾಧಾರಣ )

22) AB ಮತ್ತು CD ಎರಡು ರೇಖಾಖಂಡಗಳು 'O' ಬಿಂದುವಿನಲ್ಲಿ ಛೇದಿಸುತ್ತವೆ. AC ∥ BD ಆಗುವಂತೆ AC ಮತ್ತು BD ಗಳನ್ನು ಸೇರಿಸಿ ಮತ್ತು Δ AOC ~ Δ BOD ಎಂದು ಸಾಧಿಸಿ. ( ಸಾಧಾರಣ )

23) P ( 2, 4 ) ಮತ್ತು Q ( 8, 12 ) ಬಿಂದುಗಳ ನಡುವಿನ ದೂರವನ್ನು ದೂರ ಸೂತ್ರದ ಸಹಾಯದಿಂದ ಕಂಡುಹಿಡಿಯಿರಿ. ( ಸುಲಭ )

24) 'k' ನ ಯಾವ ಬೆಲೆಗೆ $kx^2 + 6x + 1 = 0$ ಸಮೀಕರಣದ ಮೂಲಗಳು ಸಮನಾಗಿರುತ್ತವೆ ಎಂದು ಕಂಡುಹಿಡಿಯಿರಿ. ( ಸಾಧಾರಣ)

ಶ್ರೀ ಎನ್.ಎಸ್.ಮಡಿಕಾರ ಗಣಿತ ವಿಷಯ ಶಿಕ್ಷಕರು, ಸರಕಾರಿ ಪ್ರೌಢಶಾಲೆ, ಚಿಕ್ಕಲದಾಪೂರ: 7829041398 / 8618036078

## ಪ್ರಶ್ನೆ - IV) ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ. $9 \times 3 = 27$

25) 336 ಮತ್ತು 54 ಈ ಪೂರ್ಣಾಂಕಗಳ ಲ. ಸಾ. ಅ. ಮತ್ತು ಮ. ಸಾ. ಅ. ಗಳನ್ನು ಅವಿಭಾಜ್ಯ ಅಪವರ್ತನ ವಿಧಾನದಿಂದ ಕಂಡುಹಿಡಿದು, ಲ. ಸಾ. ಅ. × ಮ. ಸಾ. ಅ. = ಆ ಎರಡು ಪೂರ್ಣಾಂಕಗಳ ಗುಣಲಬ್ಧ ಎಂಬುದನ್ನು ಕಂಡುಹಿಡಿಯಿರಿ. ( ಸಾಧಾರಣ )

26) ಶೂನ್ಯತೆಗಳ ಮೊತ್ತ 7 ಮತ್ತು ಗುಣಲಬ್ಧ 12 ಆಗಿರುವ ಒಂದು ವರ್ಗ ಬಹುಪ ದೋಕ್ತಿಯನ್ನು ಬರೆಯಿರಿ ಹಾಗೂ ಈ ವರ್ಗ ಬಹುಪದೋಕ್ತಿ - ಯ ಶೂನ್ಯತೆಗಳನ್ನು ಕಂಡುಹಿಡಿಯಿರಿ. ( ಕಠಿಣ )

27) ಇಬ್ಬರು ವ್ಯಕ್ತಿಗಳ ಮಾಸಿಕ ಆದಾಯದ ಅನುಪಾತ 9 : 7 ಮತ್ತು ಮಾಸಿಕ ಖರ್ಚುಗಳ ಅನುಪಾತ 4 : 3 ಆಗಿದೆ. ಪ್ರತಿಯೊಬ್ಬರೂ ತಿಂಗಳ ಕೊನೆಯಲ್ಲಿ ರೂ. 2000 ಉಳಿತಾಯ ಮಾಡಿದರೆ, ಅವರ ಮಾಸಿಕ ಆದಾಯವನ್ನು ಕಂಡುಹಿಡಿಯಿರಿ. ( ಕಠಿಣ )

28) ತಂದೆಯ ವಯಸ್ಸು ಅವನ ಮಗನ ವಯಸ್ಸಿಗಿಂತ 30 ವರ್ಷ ಹೆಚ್ಚಾಗಿದೆ. 5 ವರ್ಷಗಳ ನಂತರ ತಂದೆಯ ಮತ್ತು ಮಗನ ವಯಸ್ಸುಗಳ ಗುಣಲಬ್ಧವು 400 ಆಗುತ್ತದೆ. ಹಾಗಾದರೆ ಅವರಿಬ್ಬರ ಈಗಿನ ವಯಸ್ಸುಗಳನ್ನು ಕಂಡುಹಿಡಿಯಿರಿ. ( ಸಾಧಾರಣ )

29) ಒಂದು ಸಮಾಂತರ ಶ್ರೇಢಿಯ 5 ನೇ ಪದ 26 ಮತ್ತು ಸಾಮಾನ್ಯ ವ್ಯತ್ಯಾಸವು ಮೊದಲ ಪದದ ಮೂರರಷ್ಟಿದೆ. ಶ್ರೇಢಿಯ ಮೊದಲ 20 ಪದಗಳ ಮೊತ್ತವನ್ನು ಕಂಡುಹಿಡಿಯಿರಿ. ( ಸಾಧಾರಣ )

30) ಸಂಖ್ಯೆ 56 ನ್ನು ಸಮಾಂತರ ಶ್ರೇಢಿಯ ಪದಗಳಾಗಿರುವಂತೆ ನಾಲ್ಕು ಭಾಗಗಳಾಗಿ ವಿಭಾಗಿಸಿದೆ. ಅವುಗಳ ಅಂತ್ಯಪದಗಳ ಗುಣಲಬ್ಧ ಮತ್ತು ಮಧ್ಯಪದಗಳ ಗುಣಲಬ್ಧಗಳ ಅನುಪಾತವು 5 : 6 ಆದರೆ, ಆ ನಾಲ್ಕು ಪದಗಳನ್ನು ಕಂಡುಹಿಡಿಯಿರಿ. ( ಕಠಿಣ )

31) ಚಿತ್ರದಲ್ಲಿ, ABCD ಒಂದು ಸಮಾಂತರ ಚತುರ್ಭುಜವಾಗಿದ್ದು, 'P' ಬಿಂದುವು AB ಯನ್ನು 2 : 3 ಹಾಗೂ 'Q' ಬಿಂದುವು DC ಯನ್ನು 4 : 1 ಅನುಪಾತದಲ್ಲಿ ವಿಭಾಗಿಸಿದರೆ, OA = 2 × OC ಎಂದು ಸಾಧಿಸಿ. ( ಸಾಧಾರಣ )




32) ಒಂದು ತ್ರಿಭುಜದ ಶೃಂಗಗಳು A ( 8, - 4 ), B ( 9, 5 ) ಮತ್ತು C ( 0, 4 ) ಆಗಿದ್ದಾಗ, ಅದು ಸಮದ್ವಿಬಾಹು ತ್ರಿಭುಜವಾಗಿರುತ್ತದೆ ಎಂದು ತೋರಿಸಿ . ( ಸಾಧಾರಣ )

33) $\sqrt{5}$ ಒಂದು ಅಭಾಗಲಬ್ಧ ಸಂಖ್ಯೆ ಎಂದು ಸಾಧಿಸಿ. ( ಸಾಧಾರಣ )

## ಪ್ರಶ್ನೆ - V) ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ. $4 \times 4 = 16$

34) ಕೊಟ್ಟಿರುವ ರೇಖಾತ್ಮಕ ಸಮೀಕರಣಗಳ ಜೋಡಿಗೆ ನಕ್ಷೆಯ ವಿಧಾನದಿಂದ ಪರಿಹಾರವನ್ನು ಕಂಡುಹಿಡಿಯಿರಿ. ( ಸಾಧಾರಣ )

$2y + y = 6$ ಮತ್ತು $2x - y = 2$

35) ಒಂದು ಮೋಟಾರ್ ದೋಣಿಯ ಜವವು ನಿಶ್ಚಲ ನೀರಿನಲ್ಲಿ 11 km/h ಆಗಿದೆ. ಆ ದೋಣಿಯು ಪ್ರವಾಹಕ್ಕೆ ಎದುರಾಗಿ 12 km ದೂರ ಚಲಿಸಲು ಹಾಗೂ ಪ್ರವಾಹದೊಡನೆ ಮೊದಲ ಸ್ಥಾನಕ್ಕೆ ಹಿಂತಿರುಗಲು ತೆಗೆದುಕೊಳ್ಳುವ ಸಮಯ 2 ಗಂಟೆ 45 ನಿಮಿಷಗಳು. ಹಾಗಾದರೆ ಪ್ರವಾಹದ ಜವವನ್ನು ಕಂಡುಹಿಡಿಯಿರಿ. ( ಕಠಿಣ )

36) ಒಂದು ಸಮಾಂತರ ಶ್ರೇಢಿಯಲ್ಲಿ 16 ಪದಗಳಿವೆ. ಅದರ ಎಲ್ಲಾ ಪದಗಳ ಮೊತ್ತವು 768 ಆಗಿದೆ. ಶ್ರೇಢಿಯ ಕೊನೆಯ ಪದ 93 ಆಗಿದೆ. ಆ ಶ್ರೇಢಿಯನ್ನು ಕಂಡುಹಿಡಿಯಿರಿ. ಹಾಗೂ ಶ್ರೇಢಿಯ ಎಲ್ಲಾ ಪದಗಳ ಮೊತ್ತವು ಮೊದಲ 16 ಬೆಸ ಸಂಖ್ಯೆಗಳ ಮೊತ್ತದ ಮೂರರಷ್ಟಕ್ಕೆ ಸಮ - ವಾಗಿರುತ್ತದೆ ಎಂದು ಸೂತ್ರ ಉಪಯೋಗಿಸಿ ಕಂಡುಹಿಡಿಯಿರಿ. ( ಸಾಧಾರಣ )

37) ಮೂಲ ಸಮಾನುಪಾತತೆಯ ಪ್ರಮೇಯವನ್ನು ನಿರೂಪಿಸಿ ಮತ್ತು ಸಾಧಿಸಿ. ( ಸಾಧಾರಣ )

## ಪ್ರಶ್ನೆ - VI) ಈ ಕೆಳಗಿನ ಪ್ರಶ್ನೆಗೆ ಉತ್ತರಿಸಿ. $5 \times 1 = 5$

38) ಎರಡು ವಿಭಿನ್ನ ಸಮಾಂತರ ಶ್ರೇಢಿಗಳ ಸಾಮಾನ್ಯ ವ್ಯತ್ಯಾಸವು ಸಮವಾಗಿದೆ. ಮೊದಲನೇ ಸಮಾಂತರ ಶ್ರೇಢಿಯ ಮೊದಲನೇ ಪದವು ಎರಡನೇ ಸಮಾಂತರ ಶ್ರೇಢಿಯ ಮೊದಲ ಪದಕ್ಕಿಂತ 3 ಹೆಚ್ಚಾಗಿದೆ. ಮೊದಲನೇ ಶ್ರೇಢಿಯ 7 ನೇ ಪದವು 28 ಮತ್ತು ಎರಡನೇ ಶ್ರೇಢಿಯ 8 ನೇ ಪದವು 29 ಆದರೆ, ಆ ಶ್ರೇಢಿಗಳನ್ನು ಕಂಡುಹಿಡಿಯಿರಿ. ( ಕಠಿಣ )

ಶ್ರೀ ಎನ್ ಎಸ್ ಮಡಿಕಾರ ಗಣಿತ ವಿಷಯ ಶಿಕ್ಷಕರು ಸರಕಾರಿ ಪ್ರೌಢಶಾಲೆ, ಚಿಕ್ಕಆದಾಪೂರ : 7829041398 / 8618036078